ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) :– ಸನ್ಮಾನ್ಯ ಅಧ್ಯಕ್ಷರೆ, ಹಿಂದೆ ಒಂದು ಪರಿಪಾಟವಾಗಿತ್ತು. ಅದೇನೆಂದರೆ, ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲವೆಂಬ ಪ್ರತಿಷ್ಠೆ ಕೂಡ ಇತ್ತು. ಆದರೆ, ಇದಕ್ಕೆ ಪರ್ಯಾಯವಾಗಿ ಮಾನ್ಯ ಸಚಿವರು ಇದನ್ನು ವಾಪಸ್ಸು ಪಡೆಯುತ್ತಿರುವುದು ನಿಜವಾಗಿಯೂ ಕೂಡ ಸಂತೋಷದ ವಿಷಯ. ಆದಕಾರಣ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಶ್ರೀ ಜಿ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಇದನ್ನು ವಾಪಸ್ಸು ತೆಗೆದುಕೊಂಡಿರುವುದಕ್ಕೆ ನಾನೂ ಕೂಡ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ,

"2005ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ, "ಖಂಡ 2 ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :– ಮಾನ್ಯ ಅಧ್ಯಕ್ಷರೆ, "2005ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು :– ಪ್ರಸ್ತಾವ ಏನೆಂದರೆ,

"2005ನೇ ಸಾಲಿನ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(ಆ) ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ (ತಿದ್ದುಪಡಿ) ವಿಧೇಯಕ, 2004
ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ ಸಚಿವರು) : (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) :– ಮಾನ್ಯ ಅಧ್ಯಕ್ಷರೆ, "2004ನೇ ಸಾಲಿನ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಇಲಾಖೆ ಸಚಿವರು) :– ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ (ತಿದ್ದುಪಡಿ) ವಿಧೇಯಕ 2004ನ್ನು ಪರಿಶೀಲನೆಗಾಗಿ ಮಂಡಿಸಿದ್ದೇನೆ. ಮತ್ತೆ ಈ ವಿಧೇಯಕಕ್ಕೆ ಇತರಕ್ಕಂಥ ಇನ್ನೊಂದು ನಮ್ಮ ಅಧಿಕೃತ ತಿದ್ದುಪಡಿ ವಿಧೇಯಕವನ್ನು ಮಂಡಿಸುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :– ಸನ್ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ನಾವು ವಿರೋಧ ಮಾಡಬೇಕಾಗಿದೆ. ತಾವೂ ಕೂಡ ವಕೀಲರಾಗಿದ್ದೀರಿ. ಹಿಂದೆ ಅಂದರೆ 1994ರಲ್ಲಿ ಇದು ಪಾಸ್‌ಆಗಿತ್ತು. ಆದರೆ, ಇದು ಅನುಷ್ಠಾನಕ್ಕೆ ಬರದೆ ಮತ್ತೆ ತಿದ್ದುಪಡಿಗೆ ಬಂದಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ :– ಮಾನ್ಯ ಮಾಧುಸ್ವಾಮಿಯವರೆ, ಮಾನ್ಯ ಸಚಿವರು ಇದರ ಬಗ್ಗೆ ಮೊದಲು ವಿವರವಾಗಿ ಹೇಳುವುದು ಒಳ್ಳೆಯದಲ್ಲವೇ ? ಅಂದರೆ, ಯಾವ ಹಿನ್ನೆಲೆಯಲ್ಲಿ ಇದನ್ನು ತಂದಿದ್ದಾರೆಂದು ಮಾನ್ಯ ಸಚಿವರು ಒಂದು ಸಾರಿ ಹೇಳಿದಮೇಲೆ ನಾವು ಮಾತನಾಡುವುದು ಒಳ್ಳೆಯದೆಂಬುದು ನನ್ನ ಭಾವನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈ ಬಾರ್ ಕೌನ್ಸಿಲ್‌ರವರ ವಿಶೇಷ ಮನವಿಯ ಮೇರೆಗೆ ಈ ಒಂದು ತಿದ್ದುಪಡಿಯನ್ನು ನಾವು ತಂದಿದ್ದೇವೆ. ಇದೊಂದು ಅತ್ಯಂತ ಸರಳವಾಗಿರುವಂತಹ ತಿದ್ದುಪಡಿಯಾಗಿದೆ. 2004ನೇ ಇಸವಿಯಲ್ಲಿ ಬಾರ್ ಕೌನ್ಸಿಲ್‌ನವರ ವಿನಂತಿಯ ಮೇರೆಗೆ ವರ್ಷಕ್ಕೆ 2000–00 ರೂಪಾಯಿಗಳ ನಿವೃತ್ತಿ ವೇತನವನ್ನು ಹಾಗೂ 1,50,000–00 ರೂಪಾಯಿಗಳು ಗರಿಷ್ಠ ಮೊತ್ತದ ಹಣವನ್ನು ಯಾರು ವಕೀಲ ವೃತ್ತಿಯಿಂದ ನಿವೃತ್ತರಾಗುತ್ತಾರೆ ಅವರಿಗೆ ಕೊಡಬೇಕೆಂಬ ಬಗ್ಗೆ ತಿದ್ದುಪಡಿಯನ್ನು ಮಾಡಿದ್ದರು. ಆದರೆ ಹಲವಾರು ಕಾರಣಗಳಿಂದ ಆ ಒಂದು ತಿದ್ದುಪಡಿ ಅನುಷ್ಠಾನ ಆಗಲಿಲ್ಲ. ಬಾರ್ ಕೌನ್ಸಿಲ್‌ನವರು ಮತ್ತೆ ತಮ್ಮ ಕೌನ್ಸಿಲ್‌ನಲ್ಲಿ ತೆಗೆದುಕೊಂಡಿರುವಂತಹ ನಿರ್ಣಯದಲ್ಲಿ 3000–00 ರೂಪಾಯಿಗಳು ಇರುವುದನ್ನು 2000–00 ರೂಪಾಯಿಗಳಿಗೆ ಇಳಿಸಬೇಕು, ಹಾಗೂ 1,50,000–00 ಇರುವುದನ್ನು 50,000–00 ರೂಪಾಯಿಗಳಿಗೆ ಇಳಿಸಬೇಕೆಂದು ಆ ತಿದ್ದುಪಡಿಯನ್ನು ಮಾಡುವಂತೆ ಸರ್ಕಾರವನ್ನು ಕೋರಿದ್ದರು. ಆ ಒಂದು ಹಿನ್ನೆಲೆಯೊಳಗೆ ಈ ಬಿಲ್ ಬಂದಿರುತ್ತದೆ. ಅದರ ಜೊತೆಗೆ ಈ ವಕೀಲರು ಯಾರು ಈ ಟ್ರಸ್ಟ್‌ಗೆ ಫಂಡ್‌ಗೆ ಎನ್‌ರೋಲ್ ಮಾಡಿಕೊಳ್ಳುತ್ತಾರೆ. ಅದು ಆಗುವುದು ಯಾವಾಗ? ಈ ಕಾನೂನು ಬಂದ ದಿನದಿಂದ ಒಂದು ತಿಂಗಳೊಳಗಾಗಿ ಈಗಿರತಕ್ಕತಹ ವಕೀಲರು ಎನ್‌ರೋಲ್

ಆಗಬೇಕು, ಈ ಕಾನೂನು ಜಾರಿಗೆ ಬಂದ ನಂತರ ಯಾರು ಜಾಯಿಸ್ ಆಗುತ್ತಾರೆ. ಯಾರು ಸನ್ನದು ತೆಗೆದುಕೊಳ್ಳುತ್ತಾರೆ ಅವರು ಅದನ್ನು ತೆಗೆದುಕೊಂಡ, ಒಂದು ತಿಂಗಳೊಳಗಾಗಿ ಈ ಫಂಡ್‌ಗೆ ಎನ್‌ರೋಲ್ ಆಗಬೇಕು. ಒಂದು ವೇಳೆ ಆ ರೀತಿಯಾಗಿ ಆಗದೆ ಹೋದರೆ ಕೆಲವು ಫೆನಾಲ್ಟಿ ಕ್ಲಾಜ್ ಮಾಡಿದ್ದಾರೆ. ಆ ರೀತಿಯಾಗಿ ನಡೆದುಕೊಳ್ಳಬೇಕೆಂದು ಇರತಕ್ಕಂತಹ ಒಂದು ಸರಳವಾಗಿರುವಂತಹ ಬಿಲ್ ಆಗಿದೆ. ಇದು ಬಹಳ ದಿವಸಗಳಿಂದ ಪೆಂಡಿಂಗ್ ಇದೆ. ಇದರಲ್ಲಿ ಮಾನ್ಯ ಮಾಧುಸ್ವಾಮಿಯವರು ಹಾಗೂ ಬಾರ್‌ಕೌನ್ಸಿಲ್‌ನ ಅಧ್ಯಕ್ಷರು ಚರ್ಚೆ ಮಾಡುವ ಬಗ್ಗೆ ಏರ್ಪಾಟು ಮಾಡಿದ್ದೇವೆ, ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಲಿಲ್ಲ, ಅದು ನಿಜ, ಈ ಹೊತ್ತಿಗೆ ಅವರಿಗೆ ಅದರ ಬಗ್ಗೆ ಸರಿಯಾದ ಚಿತ್ರಣ ಸಿಕ್ಕಿರಲಿಕ್ಕೆ ಸಾಕು ಎಂದು ನಾನು ಭಾವಿಸಿದ್ದೇನೆ. ಇದನ್ನು ತಾವು ಒಪ್ಪಬೇಕೆಂದು ನಾನು ತಮ್ಮಲ್ಲಿ ಕೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ಸಾರ್ ಈ ಬಿಲ್ ಏನಾಗಿತ್ತೆಂದರೆ, ಎನ್‌ರೋಲ್‌ಮೆಂಟ್ ಆಗಬೇಕಾದರೆ 2000–00 ರೂಪಾಯಿಗಳನ್ನು ಕಟ್ಟಿಸಿಕೊಂಡು ಮೊದಲೇ 20,000–00 ಕೊಡಬೇಕೆಂದು ಇತ್ತು. ಆಮೇಲೆ cessation of his practice or death. – 50,000–00 ರೂ. ಆಯಿತು. ಅದನ್ನು 2004ನೇ ಇಸವಿಯಲ್ಲಿ 1,50,000–00 ರೂಪಾಯಿಗಳೆಂದು ಮಾಡಿದರು. ಇದು ನೇರವಾಗಿ ಯಾರಿಗೂ 1,50,000–00 ರೂಪಾಯಿಗಳನ್ನು ಕೊಡುತ್ತಿರಲಿಲ್ಲ. ಒಂದು ವರ್ಷ ಪ್ರಾಕ್ಟೀಸ್ ಮಾಡಿದರೆ 3 ವರ್ಷದಂತೆ ಸಾವಿರ ರೂ.ಗಳಂತೆ ಲೆಕ್ಕ ಮಾಡಿ 20 ವರ್ಷ ಪ್ರಾಕ್ಟೀಸ್ ಮಾಡಿದರೆ 60,000–00, 25 ವರ್ಷ ಪ್ರಾಕ್ಟೀಸ್ ಮಾಡಿದರಿಗೆ 75,000–00, whichever is less. 50 ವರ್ಷ ಪ್ರಾಕ್ಟೀಸ್ ಮಾಡಿದವರಿಗೆ 1,50,000–00 ರೂ. ಕೊಡಬೇಕೆಂದು ಇತ್ತು. ಅದನ್ನು ಏನು ಮಾಡಿದವರು ಎಂದರೆ ಅದನ್ನು 2000–00 ರೂಪಾಯಿಗಳಿಗೆ ಇಳಿಸುತ್ತಾರೆ, ಒಂದು ವರ್ಷ ಪ್ರಾಕ್ಟೀಸ್ ಮಾಡಿದವರಿಗೆ 2000–00 ರೂಪಾಯಿಗಳನ್ನು ಕೊಡುವುದು, ಮ್ಯಾಕ್ಸಿಮಮ್ 50,000–00 ರೂಪಾಯಿಗಳೆಂದು ಈ ಬಿಲ್‌ನಲ್ಲಿ ಮಾಡುತ್ತಿದ್ದಾರೆ. ಮೊದಲು ಏನು ಎಂಟ್ರಿ ಫೀ ಏನಿತ್ತು, ಅದನ್ನು ಇವರು 3000–00 ರೂಪಾಯಿಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಆಮೇಲೆ ಇವರು ಏನು ಮಾಡುತ್ತಾರೆಂದರೆ ಈಗ ನಾವು ಮತ್ತು ನೀವುಗಳು ಇದ್ದೇವೆ, ಇದು ನಮ್ಮನ್ನು ತಪ್ಪಿಸುವುದಕ್ಕಾಗಿ ಮಾಡಿರುವಂತಹ ಬಿಲ್ ಆಗಿದೆ. ಇದರ ಬಗ್ಗೆ ನಾನು ಸ್ವಲ್ಪ ಬಿಡಿಸಿ ಹೇಳುತ್ತೇನೆ. ಪ್ರತಿ 5 ವರ್ಷಕ್ಕೊಮ್ಮೆ ನೀವು ಡಿಕ್ಲರೇಷನ್ ಕೊಡಬೇಕು I am still a practicing advocate – ಎಂದು ಹೇಳಿ 500–00 ರೂಪಾಯಿಗಳನ್ನು ಹಣವನ್ನು ಕಟ್ಟಿ ರಿನ್ಯೂ ಮಾಡಬೇಕೆಂದು ನಮಗೆ ಬಾರ್ ಮಾಡುತ್ತಿದ್ದಾರೆ. ಒಂದು ಕಡೆ ವರ್ಷಕ್ಕೆ 1000–00 ರೂಪಾಯಿಗಳನ್ನು ಕಡಿಮೆ ಮಾಡಿ 25 ವರ್ಷ ಪ್ರಾಕ್ಟೀಸ್ ಮಾಡಿದರೆ 50,000–00 ರೂಪಾಯಿಗಳನ್ನು ರೀಚ್ ಆಗುವಂತಹ ಸ್ಥಿತಿಯಾಗಿದೆ. ಇನ್ನೊಂದು ಕಡೆ ನೀವು ಪ್ರತಿ 5 ವರ್ಷಕ್ಕೆ ಮಾಡಬೇಕು, ಇನ್ನೊಂದು ಕಡೆ ಎಂದು ಅವರು ಪುಕಸಟ್ಟೆ ಕೊಡುವುದಿಲ್ಲ. ನಮ್ಮ ಹತ್ತಿರ ಹಣವನ್ನು ಕಟ್ಟಿಸಿಕೊಳ್ಳುವವರು ಪ್ರತಿ ಪೆಟಿಷನ್ಸ್ ಮೇಲೆ ನಾವು ವೆಲ್‌ಫೇರ್ ಫಂಡ್ ಸ್ಟಾಂಪ್ 5–00 ರೂಗಳನ್ನು ಅಡ್ವೋಕೇಟ್ಸ್‌ಗಳು ಹಾಕುತ್ತಿದ್ದೆವು. ಐ.ಎ.ಗೆ ಹಾಕಿ ಎಂದು ಈಗ ಹೇಳುತ್ತಾರೆ, ತಾವು ಲಾಯರು ಎಂದು ಹೇಳುತ್ತಾರೆ.

ಒಂದು ಪಿಟಿಷನ್‌ಗೆ 8 ರಿಂದ 10 ಐ.ಎ. ಹಾಕುತ್ತೇವೆ. ಇದು ಪಾಪ ಅವನ್ಯಾರು ನ್ಯಾಯವನ್ನು ಕೇಳಿಕೊಂಡು ಬಂದವನಿಗೆ ದುಬಾರಿ ಆಗುತ್ತಾ ಹೋಗುತ್ತದೆ. ಒಂದು ಇದು practically impossible ಪ್ರತಿ ಐ.ಎ.ಗೆ ನಾವು ಇವತ್ತು ವೆಲ್‌ಫೇರ್ ಫಂಡ್ ಸ್ಟಾಂಪ್ 5–00 ರೂಪಾಯಿಗಳನ್ನು ಅಫಿಕ್ಸ್ ಮಾಡಬೇಕಾಗಿದೆ. ಇಲ್ಲದೆ ಹೋದರೆ ತೆಗೆದುಕೊಳ್ಳಬೇಡಿ ಎಂದು ಬ್ಯಾನ್ ಮಾಡಿಬಿಟ್ಟಿದ್ದಾರೆ. ಇದುವರೆವಿಗೂ ಏನಾಗುತ್ತಿತ್ತೆಂದರೆ ಜಡ್ಜ್‌ಗಳು ಕಾಗ್ನಿಸೆನ್ಸ್ ಐ.ಎ.ಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಪಿಟಿಷನ್ಸ್ ಮೇಲೆ ಹಾಕಿದರೆ ಕೇಸ್‌ಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಪ್ರತಿ ಇಂಟರ್‌ಲಾಕ್ಯೂಟರಿ ಅಪ್ಲಿಕೇಷನ್ ಅನ್ನು ಅವರು ಜಡ್ಜ್ ಕನ್ಸಿಡರ್ ಮಾಡಬೇಕೆಂದರೆ ವೆಲ್‌ಫೇರ್ ಫಂಡ್ ಸ್ಟಾಂಪ್‌ನ್ನು ಅಫಿಕ್ಸ್ ಮಾಡಿರಲೇಬೇಕು. ಮತ್ತೆ ನೀವೇನಾದರೂ 5 ವರ್ಷ ಆದಮೇಲೆ ಡಿಕ್ಲರೇಷನ್ ಕೊಡದೆ ಹೋದರೆ, there you ceases to be the advocate. – ನಿಮ್ಮದು ಕಾಲ ಸೆಟ್ಲೆಂಡ್ ಆಗಿಹೋಯಿತು, ಎಂದು ಹೇಳಿ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ. ಆಕಸ್ಮಾತ್ 40 ವರ್ಷ ಅದವರಿಗೆ 40 ವರ್ಷ ಆದ ಮೇಲೆ ಏನರೋಲ್ ಮಾಡಿಸಿದರೆ ವರ್ಷಕ್ಕೆ ಒಂದು ಸಾವಿರ ರೂಪಾಯಿಗಳಂತೆ ವೆಲ್‌ಫೇರ್ ಫಂಡ್‌ನಲ್ಲಿ ಬೆನಿಫಿಟ್ ಕೊಡುವುದನ್ನು ಲೆಕ್ಕ ಮಾಡಿ ಎಂದು ಹೇಳುತ್ತಾರೆ. 60 ವರ್ಷ ಆದಮೇಲೆ ಏನ್‌ರೋಲ್ ಮಾಡಿದರೆ 3000–00 ರೂಪಾಯಿಗಳಂತೆ ಕೊಡಿ ಎಂದು ಹೇಳುತ್ತಾರೆ. ಇದರ ಬಗ್ಗೆ ತಾವು ಅರ್ಥ ಮಾಡಿಕೊಳ್ಳಬೇಕು, 60 ವರ್ಷ ಆದ ಮೇಲೆ ಎನ್‌ರೋಲ್ ಆದರೆ ವರ್ಷಕ್ಕೆ 3000–00 ರೂಪಾಯಿಗಳಂತೆ ಅವನಿಗೆ ಬೆನಿಫಿಟ್‌ನ್ನು ಕ್ಯಾಲ್‌ಕ್ಯುಲೇಟ್ ಮಾಡಿ ಅವನು ಎಷ್ಟು ವರ್ಷ ಪ್ರಾಕ್ಟೀಸ್ ಮಾಡುತ್ತಾನೆ, ಅದನ್ನು ಕೊಡಬೇಕಂತೆ. 40 ವರ್ಷಕ್ಕೆ ಸೇರಿದವನಿಗೆ ಕಡಿಮೆ ಕೊಡಬೇಕಂತೆ, ಇದು ನಿಮಗೆ ಅರ್ಥವಾಗುತ್ತದೆ. ಗೌರ್ನಮೆಂಟ್ ಅಫಿಷಿಯಲ್ ಆಗಿದ್ದು, ಜಡ್ಜ್‌ಗಳಾಗಿದ್ದು, ಯಾರಾದರೂ ಪ್ರೊಫೆಷನಲ್‌ಗೆ ಬಂದರೆ ಅವರು ವರ್ಷಕ್ಕೆ 3000–00 ರೂಪಾಯಿಗಳನ್ನು ತೆಗೆದುಕೊಳ್ಳಬಹುದು. ಅವರು ಪ್ರಾಕ್ಟೀಸ್‌ನ್ನು ಬಿಟ್ಟನಂತರ ಈ ರೀತಿಯಾಗಿ ಹಣವನ್ನು ತೆಗೆದುಕೊಳ್ಳಬಹುದು. ಪಾಪ ಹುಡುಗರು 40 ವರ್ಷಕ್ಕೆ ಬಂದು ಎನ್‌ರೋಲ್ ಮಾಡಿಕೊಂಡರೆ ಅವರಿಗೆ ಬೆನಿಫಿಟ್ ಕಡಿಮೆ ಮತ್ತೆ ಇದು practically impossible ಸಾರ್. ಅದರಲ್ಲೂ ಇದು ಕಬ್ಸ್ ಮಾಡಬೇಕೆಂದು ಬೇರೆ ಕ್ಷೇತ್ರದಲ್ಲಿ ಲಾಯರ್ ಎಂದು ಎನ್‌ರೋಲ್ ಆಗಿದ್ದವರಿಗೆ ತಂದಿರುವಂತಹ ಬಿಲ್ ಆಗಿದೆ. we cannot approve. – ನೀವು ಲಾಯರ್ ಆಗಿದ್ದೀರಿ, 5–5 ವರ್ಷಕ್ಕೆ ನೀವು ವಕಲಾತ್ತುಗಳನ್ನು ಕೋರ್ಟಿನಲ್ಲಿ ಹಾಕಿರಬೇಕು, ನಿಮ್ಮದು ಸ್ಟಾಂಪ್ ಅಲ್ಲಿಗೆ ಜಮಾ ಆಗಿರಬೇಕು, ನೀವು 500–00 ರೂಪಾಯಿಗಳನ್ನು ಕಟ್ಟಿ ರಿನ್ಯೂ ಮಾಡಿಕೊಂಡಿರಬೇಕು. ಏನೋ ಒಬ್ಬ ಲಾಯರ್ ಆಗಿ ಸತ್ತರೆ ಅಥವಾ ಅವನು ಪ್ರಾಕ್ಟೀಸ್ ಬಿಟ್ಟ ದಿವಸ ಕೊಡಬೇಕಾದ ಬೆನಿಫಿಟ್ 50,000–00 ರೂಪಾಯಿಗಳು ಇದ್ದುದ್ದನ್ನು 1,50,000–00 ರೂಪಾಯಿಗಳಿಗೆ ತಂದವರು ಅದನ್ನು ಇಂಪ್ಲಿಮೆಂಟ್ ಕೂಡ ಮಾಡಲಿಲ್ಲ. ಗೌರ್ನಮೆಂಟ್ ಅದನ್ನು ಇಂಪ್ಲಿಮೆಂಟ್ ಮಾಡಲಿಲ್ಲ. ಅದು ಹಾಗೆಯೇ ಇದೆ, ಇದುವರೆವಿಗೂ ಒಬ್ಬರಿಗೂ ಕೂಡ 1,50,000–00 ರೂಪಾಯಿಗಳನ್ನು ಕೊಡಲೇ ಇಲ್ಲ. ಮಧ್ಯೆ ಅಮೆಂಡ್‌ಮೆಂಟ್‌ನ್ನು ತಂದುಬಿಟ್ಟರು, ಮತ್ತೆ ಅದನ್ನು ನಾವು 50,000–00 ರೂಪಾಯಿಗಳಿಗೆ ಇಳಿಸುತ್ತಿದ್ದೇವೆ. That too Bar Council - ಇದನ್ನು ಕೆಳುತ್ತದೆ ಎಂದರೆ it is a shocking news for me sir. Bar council is there for the welfare of the

Advocates. 1,50,000–00 ರೂಪಾಯಿಗಳನ್ನು ಸರ್ಕಾರವೇ ಕೊಡುತ್ತೇವೆಂದರೆ, 50,000–00 ರೂಪಾಯಿಗಳಿಗೆ ಇಳಿಸಿ ಎಂದು ಬಾರ್ ಕೌನ್ಸಿಲ್‌ನವರೇ ಕೇಳುತ್ತಾರೆಂದರೆ ನನಗೆ ಅರ್ಥವಾಗುತ್ತಿಲ್ಲ. ಬಾರ್ ಕೌನ್ಸಿಲ್‌ನವರು ಈ ರೀತಿಯಾಗಿ ಕೆಲಸ ಮಾಡುತ್ತಾರೆಂದರೆ ಅರ್ಥವಾಗಲೇ ಇಲ್ಲ. ಇನ್ನು ಎರಡನೆಯದಾಗಿ ನಾನೂ ಕೂಡ ಬಾರ್ ಕೌನ್ಸಿಲ್‌ನ ಮಾಜಿ ಅಧ್ಯಕ್ಷರುಗಳ ಜೊತೆಯಲ್ಲಿ ಮಾತನಾಡಿದ್ದೇನೆ. ಐ.ಎ. ಮೇಲೆ ನೀವು ಸ್ಟಾಂಪ್‌ನ್ನು ಆಫಿಕ್ಸ್ ಮಾಡಬೇಕೆಂದರೆ ಪ್ರಾಕ್ಟೀಸ್ ಮಾಡುವವರಿಗೆ ಬಹಳ ಕಷ್ಟವಾಗುತ್ತದೆ. ಬೆಳಿಗ್ಗೆ ಮತ್ತು ಮಧ್ಯಾಹ್ನ ಒಂದೊಂದು ಹಾಕುತ್ತೇವೆ, ಅಡ್ವೋಕೇಟ್ಸ್‌ಗಳು ಕೇಸ್‌ನ್ನು ನಡೆಸಬೇಕಾದರೆ depending on the nature ನಿಮಗೆ ಗೊತ್ತಲ್ಲಾ, ತಕ್ಷಣ ಒಂದು ಇಂಟರಿಮ್ ಅಪ್ಲಿಕೇಷನ್‌ನ್ನು ಹಾಕಬೇಕಾಗುತ್ತದೆ. ನೀವು ಆಗ ಅಲ್ಲಿಗೆ 5–00 ರೂಗಳ ಸ್ಟಂಪ್‌ನ್ನು ಹಾಕಬೇಕು. ಆಮೇಲೆ 5–00 ರೂ. ಸ್ಟಾಂಪ್ ಹಾಕಿದವರಿಗೆ ಡಿಕ್ಲೇರ್ಸ್ ಅಂತೆ ಅವನು, ನನಗೆ ಬಾರ್ ಕೌನ್ಸಿಲ್ ಫಂಡ್ ಬೇಡ ಈ ವೆಲ್‌ಫೇರ್ ಫಂಡ್‌ನಲ್ಲಿ ನಾನು ಫಲಾನುಭವಿ ಅಲ್ಲ, I am not a contributary or member of this fund ಅಂತ ನಾನು ಹೇಳಿಕೊಂಡಂತೆ ಎಂದು ಹೇಳಿ, ಜಡ್ಜ್‌ಗಳು ಐ.ಎ.ಗಳನ್ನೇ ತೆಗೆದುಕೊಳ್ಳಬಾರದೆಂದು ನಿರ್ಬಂಧ ಮಾಡುವ ಬಗ್ಗೆ ಈ ಬಿಲ್‌ನ್ನು ತೆಗೆದುಕೊಂಡು ಬಂದಿದ್ದಾರೆ. ಮಾನ್ಯ ಹೆಚ್.ಕೆ. ಪಾಟೀಲ್‌ರವರು ಲಾಯರ್ ಆಗಿದ್ದರೂ ಕೂಡ ಅವರಿಗೆ ಇದರಿಂದ ಏನೂ ಬೇಕಾಗಿರಲಿಲ್ಲ. ನಮ್ಮಂಥವರಿಗೆ ಬೇಕಾಗಿದೆ ಸಾರ್, ನಾವು ಒಂದಷ್ಟು ದಿನ ಕೋರ್ಟುಗಳಲ್ಲಿ ಓಡಾಡಿಕೊಂಡಿದ್ದವರಿಗೆ ಯಾವತ್ತಾದರೂ ಒಂದು ಸೆಕ್ಯುರಿಟಿ ಎಂದು ಇರುವುದು ನಾವೆಲ್ಲರೂ ಅದಕ್ಕೆ ಕಾಂಟ್ರಿಬ್ಯೂಟರ್ಸ್ ಆಗಿ ಫಂಡ್‌ಗೆ ಇರುವವರು ಅದರಲ್ಲಿ ಮೆಂಬರ್ ಆಗಿರುವವರಿಗೆ ಈ ತರಹ ನಿರ್ಬಂಧಗಳನ್ನು ಮಾಡುವಂತಹ ಶಾಸನಗಳನ್ನು ನೀವು ಏತಕ್ಕಾಗಿ ತರುತ್ತಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ಇದನ್ನು ವಿತ್‌ಡ್ರಾ ಮಾಡಬೇಕು. in the interest of the Advocate's family. ನಾನು ಅಡ್ವೋಕೇಟ್ ಆಗಿದ್ದಾಗ ಇದನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ನಾನು ಪ್ರೊಫೇಶನ್‌ನ್ನು ಬಿಟ್ಟಾಗ ಅಥವಾ ನನು ತೀರಿಹೋಗಾಗ ಮಾತ್ರ ಈ ಹಣ ಸಂಸಾರಕ್ಕೆ ಬರುವಂತಹದ್ದು ಆಗಿದೆ. ಇವತ್ತು ಬೆಂಗಳೂರು ಒಂದರಲ್ಲಿಯೇ 12 ರಿಂದ 13 ಸಾವಿರ ಜನ ಅಡ್ವೋಕೇಟ್ಸ್‌ಗಳು ಇದ್ದಾರೆ. Do you know their living standard today Sir ? ಬಹಳ ಕಷ್ಟ ಇದೆ ಸಾರ್. ದೀಢೀರ್ ಎಂದು ಒಬ್ಬ ಅಡ್ವೋಕೇಟ್ ಸತ್ತು ಹೋದರೆ ಇವತ್ತಿನದಿವಸ ಅವನ ಸಂಸಾರ ಬೀದಿಪಾಲಾಗುತ್ತಾರೆ. ಏನೋ ಅಲ್ಪಸ್ವಲ್ಪ ಅರ್ಜಿಗಳನ್ನು ಹಾಕಿಕೊಂಡು ಜೀವನ ನಡೆಸುವವರಿಗೆ ಕನಿಷ್ಠ ಅವರ ಹೆಂಡತಿ ಮಕ್ಕಳಿಗೆ ಅವರ ಕೈಗೆ ಸ್ವಲ್ಪ ಹಣ ಕೊಟ್ಟರೆ ಒಳ್ಳೆಯದು. ನಾವು 50 ವರ್ಷ ಪ್ರಾಕ್ಟೀಸ್ ಮಾಡಿ 1,50,000–00 ರೂಪಾಯಿಗಳನ್ನು ತೆಗೆದುಕೊಂಡರೆ ಏನಾಗುತ್ತದೆ ಸಾರ್ ? ನೀವು ಪ್ರಾಕ್ಟೀಸ್‌ನಲ್ಲಿ 50 ವರ್ಷ ರೀಚ್ ಆಗಬೇಕು, ಪ್ರಾಕ್ಟೀಸ್50 ವರ್ಷ ಮಾಡಿದವರೆ ಮಾತ್ರ 1,50,000–00 ರೂಪಾಯಿಗಳನ್ನು ಸಿಗುತ್ತಿತ್ತು. 1,50,000 ರೂಪಾಯಿಗಳು ಸಿಗುತ್ತಿದ್ದುದ್ದನ್ನು ಈಗ ನೀವು 50 ವರ್ಷಕ್ಕೆ 50,000 ರೂಪಾಯಿಗಳಿಗೆ ವೆರಾಡುತ್ತೇವೆಂದು ಹೇಳಿ ಕಾನೂನು ತರುವುದು ನಿಜವಾಗಿ ಇದು ತಮಗಲ್ಲ ಎಂಬುದು ನನ್ನ ಭಾವನೆಯಾಗಿದೆ. ಇದರ ಬಗ್ಗೆ ಚರ್ಚೆ ಬೇಕಾಗಿರುವುದಿಲ್ಲ. ಇದನ್ನು ತಾವು ವಿತ್‌ಡ್ರಾ ಮಾಡಿಕೊಳ್ಳಿ ಮತ್ತು ತಾವು 2004ರಲ್ಲಿ ದೊಡ್ಡಮನಸ್ಸು ಮಾಡಿ ಏನು ಶಾಸನವನ್ನು ಮಾಡಿದ್ದಿರಿ, ಅದನ್ನು ಇಂಪ್ಲಿಮೆಂಟ್

ಮಾಡಿ, ಅದು ಇಂಪ್ಲಿಮೇಟೆಷನ್‌ಗೆ ಕೊಡದೇನೇ ಅದನ್ನು ಬ್ಲಾಕ್ ಮಾಡಿಟ್ಟು ಹಳೆಯ ಕಾನೂನನ್ನೇ ನೀವು ವಾಪಸ್ಸು ಜಾರಿಗೆ ತರುವ ಬಗ್ಗೆ ಅಮೆಂಡ್‌ಮೆಂಟ್‌ನ್ನು ಪ್ರಪೋಸ್ ಮಾಡುವುದು ಅಷ್ಟೊಂದು ಚೆನ್ನಾಗಿ ಕಾಣುವುದಿಲ್ಲ : ಈ ಬಿಲ್‌ನ್ನು ನಾನು ವಿರೋಧ ಮಾಡುವುದು ಅನಿವಾರ್ಯವಾಗಿದೆ. It is in the interest of the Advocates' family. ರಾಜ್ಯದಲ್ಲಿ ಸುಮಾರು 27–28 ಸಾವಿರ ಅಡ್ವೋಕೇಟ್ಸ್‌ಗಳು ಇದ್ದಾರೆ. ಆ ಫ್ಯಾಮಿಲಿಗಳ ಗತಿ ಏನು ? ಅವರಿಗೆ ಸೆಕ್ಯುರಿಟಿ ಬೇಡವೇ ? ಲಾಯರ್ ಆಗಿದ್ದವರು ಇಂತಹ ಕ್ಷೇತ್ರಗಳಿಗೆ ಬರುವವರನ್ನು ಬಂದ್ ಮಾಡಿದ ಹಾಗೆ ಸಾರ್. I became MLA ಅಂದರೆ I leases to be the advocate, ಇವರ ಪ್ರಕಾರ ನಾನು ಅಲ್ಲಿ ಫೀಯನ್ನು ಹಾಕುವುದಿಲ್ಲ. ಅಲ್ಲಿ ಕೋರ್ಟಿನಲ್ಲಿ ವಕಾಲತ್ತನ್ನು ಹಾಕುವುದಿಲ್ಲ. ನೀವು ಕೋರ್ಟಿನಲ್ಲಿ ವಕಾಲತ್ತನ್ನು ಹಾಕದೆ ಇರುವುದರಿಂದ ನೀವು ಲಾಯರ್ ಅಲ್ಲ, ನಿಮಗೆ ಈ ಫಂಡ್‌ನಲ್ಲಿ ಅವಕಾಶವಿಲ್ಲ 1,2,3 ವರ್ಷ ಎಂದು ಏನು ಪ್ರಾಕ್ಟೀಸ್ ಮಾಡಿದ್ದೀರಿ, ವರ್ಷಕ್ಕೆ ಎರಡು ಸಾವಿರ ರೂಪಾಯಿಗಳಂತೆ ಲೆಕ್ಕ ಹಾಕಿ ತೆಗೆದುಕೊಳ್ಳಿ ಎಂದು ಮಾಡಿರುವಂತಹ ಕಾನೂನು ಇದಾಗಿದೆ. ಇದಕ್ಕೆ ನಾವೇನೂ ಕಾಂಟ್ರಿಬ್ಯೂಟ್ ಮಾಡುತ್ತೇವೆ. ಪ್ರತಿ ಪಿಟಿಷನ್ಸ್‌ಗೆ ಸ್ಟಾಂಪ್ ಹಾಕುತ್ತೇವೆ. ಪ್ರತಿ ಐ.ಎ.ಗೆ ಹಾಕಿ ಎಂದು ಇನ್‌ಸಿಸ್ಟ್ ಮಾಡುತ್ತಿದ್ದಾರೆ. ನಾನು ಇನ್ನು 5–00 ರೂ. ಬೇಕಾದರೆ ಮೇನ್ ಪಿಟಿಷನ್ಸ್ ಮೇಲೆ ನೀವು ಸ್ಟಾಂಪ್ ಫೀಯನ್ನು ಜಾಸ್ತಿ ಮಾಡಿ ಬೇಡ ಎನ್ನುವುದಿಲ್ಲ. 5 ರೂಪಾಯಿಗಳ ಬದಲು 10 ರೂಪಾಯಿಗಳನ್ನು ಹಾಕಿ, But every interiocutary applicationಗೆ ಫೀಯನ್ನು ಫಿಕ್ಸ್ ಮಾಡುವುದು ಸರಿಯಲ್ಲ. ಆ ಗಿರಾಕಿ ಬಂದವನು ಪಾಪ ಅವನು ಸತ್ತುಹೋಗುತ್ತಾನೆ. ಕ್ಲೈಂಟ್ ಎಷ್ಟು ಕೊಡುತ್ತಾನೆ ಸಾರ್ ? ಮತ್ತೆ ಪ್ರತಿ ಐ.ಎ.ಗೆ ಹಾಕುವುದು ಪ್ರಾಕ್ಟಿಕಲ್ ಇಂಪಾಸಿಬಲ್ ಸಾರ್. ಅದರಿಂದ ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. 60 ವರ್ಷ ಆದಮೇಲೆ ಬೆನಿಫಿಟ್ ಕೊಡಬೇಕೆಂದು ಏನು ಮಾಡಿದ್ದೀರಿ, this is a bureaucratic approach. 60 ವರ್ಷ ಆದ ಮೇಲೆ ಪ್ರಾಕ್ಟೀಸ್‌ಗೆ ಯಾರು ಬರುತ್ತಾರೆ ? ಎನ್‌ರೋಲ್‌ನ್ನು ಮಾಡಿಸಿಕೊಂಡು ಬರುವವರಿಗೆ ಅನುಕೂಲವನ್ನು ಕೊಡುವುದಕ್ಕೆ ಹೊರಟರೆ ನೀವು ಯಾರಿಗೆ ಹೆಲ್ಪ್ ಮಾಡುತ್ತಿದ್ದೀರಿ ಇದರ ಉದ್ದೇಶ ಸ್ಪಷ್ಟವಾಗಿ ಎದ್ದು ಕಾಣುತ್ತದೆ. Either a Government official or a retired judge can take up the practice. ಅವರಿಗೆ ನೀವು ಇನ್ನೊಂದು ಕಡೆಬೇಕಾದಷ್ಟು ಬಳಸಿಕೊಂಡು ಜೀವನವನ್ನು ಮಾಡಿಕೊಂಡು ಬಂದವನಿಗೆ ಮತ್ತೆ ಜಾಸ್ತಿ ಪ್ರಯೋಜನವನ್ನು ಕೊಡುವುದು ಸರಿಯೇ ? 40 ವರ್ಷ, ಯಾವುದೋ ಒಂದು ಕಾರಣಕ್ಕಾಗಿ ಪ್ರಾಕ್ಟಿಸ್‌ಗೆ ಬಂದಿರುವುದಿಲ್ಲ. 40 ವರ್ಷ ಆದ ಮೇಲೆ ಎನ್‌ರೋಲ್ ಮಾಡಿಕೊಂಡು ಜೀವನ ಕಡಿಮೆ ಬೆನಿಫಿಟ್ ಎಂದು ಕೊಡುವುದಿಲ್ಲ. ಇದು ಅಷ್ಟು ಸಮಯೋಚಿತವಲ್ಲ ಎನ್ನುವ ಭಾವನೆ, ದಯಮಾಡಿ ಕಾನೂನು ಸಚಿವರು ಇದನ್ನು ಪುನರ್‌ವಿಮರ್ಶೆ ಮಾಡಬೇಕು. ಈಗ ರೆವಿನ್ಯೂ ಮಿನಿಷ್ಟರ್‌ರವರು ದೊಡ್ಡ ಮನಸ್ಸನ್ನು ಮಾಡಿದರು. ಬಡ್ಡಿ ಧಾರಣೆ ಕೊಡಲಿ, ಒಂದೇ ಸಾರಿ ಕ್ಲಿಯರ್ ಮಾಡಿಬಿಡಲಿ ಏತಕ್ಕಾಗಿ ಈ ಬಿಲ್ ಅಂದಿದ್ದಕ್ಕೆ He accepted and withdrew the Bill. ತಾವು ಹಾಗೆಯೇ ದೊಡ್ಡ ಮನಸ್ಸು ಮಾಡಿ ಇದನ್ನು ಹಿಂದಕ್ಕೆ ತೆಗೆದುಕೊಂಡು ಹಳೆಯದೇನು ಮಾಡಿದ್ದೀರಿ, 2004ರಲ್ಲಿ ಅದನ್ನು ಅನುಷ್ಠಾನಕ್ಕೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಸನ್ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸದಸ್ಯರಾದ ಶ್ರೀ ಮಾಧುಸ್ವಾಮಿಯವರು ಸದನಕ್ಕೆ ಏನು ಮಾಹಿತಿಯನ್ನು ಕೊಟ್ಟಿದ್ದಾರೆ ನಾನು ಅದನ್ನು ಒಪ್ಪುತ್ತಾ ಇವತ್ತು ಕರ್ನಾಟಕ ಬಾರ್ ಕೌನ್ಸಿಲ್ ಮೆಂಬರ್‌ಗಳು ಎಲ್ಲರೂ ಇದಕ್ಕೆ ಮಾಡಿದ್ದೀರಿ 5 ವರ್ಷಗಳಿಗೆ ಒಂದು ಸಾರಿ ಅವರು ಹೇಳಿದಹಾಗೆ ನಮ್ಮನ್ನೆಲ್ಲರನ್ನೂ ಹೊರಗೆ ಇಡುವಂತಹದ್ದು ನಾವು ಪುನಃ ವಾಪಸ್ಸು ಹೋಗುವ ಹಾಗಿಲ್ಲ. ಇದರಲ್ಲಿ ಇನ್ನೊಂದು ಆಗುತ್ತದೆ. ನಾವು ಸುಮ್ಮನೆ ಇಲ್ಲಿ ಕುಳಿತುಕೊಂಡು ವಕಾಲತ್ತಿಗೆ ಸಹಿಯನ್ನು ಹಾಕುವಂತಹ ಪರಿಸ್ಥಿತಿ ಬರಬಾರದು. ಬೇನಾಮಿ ಸಹಿಯನ್ನು ಹಾಕುವಂತಹ ಪರಿಸ್ಥಿತಿಗೆ ನಮ್ಮನ್ನು ತಳ್ಳಬೇಡಿ. ನಾವು ಕೋರ್ಟಿಗೆ ವಾದವನ್ನು ಮಾಡುವುದಕ್ಕೆ ಹೋಗದೆ ನಮ್ಮ ಹಳೆಯ ಅಫೀಸಿನಲ್ಲಿ ಹೋಗಿ ವಕಾಲತ್ತಿಗೆ ದಸ್ಕತ್ ಹಾಕುವಂಥ ಆ ಪರಿಸ್ಥಿತಿಯೂ ಬರಬಾರದು. ಎಲ್ಲರೂ ಕೂಡ ಅದಕ್ಕೆ ಸಹಿಯನ್ನು ಹಾಕಬಹುದು. ಅದನ್ನು ಮಾಡಬಾರದು. ಇನ್ನೊಂದು ಐಎಗೆ ಪುನಃ ಅಫಿಕ್ಸ್ ಮಾಡುವಂತಹದ್ದು ನಮಗೆ ಎರಡು ಕೆಲಸಗಳಾಗುತ್ತದೆ. ಒಂದು ಕೋರ್ಟಿಗೆ ಹೋಗಿ ಅಫಿಕ್ಸ್ ಮಾಡುವುದು ಮತ್ತೊಂದು ಬಾರ್ ಕೌನ್ಸಿಲ್‌ಗೆ ಹೋಗಿ ಅಲ್ಲಿ ಹಣವನ್ನು ಕಟ್ಟುವುದು ಆಗುತ್ತದೆ. ಇಂತಹ ಎರಡು ಕೆಲಸವನ್ನು ಮಾಡಬೇಡಿ. ದಯವಿಟ್ಟು ನಾನು ತಮ್ಮ ಹತ್ತಿರ ಕೇಳುವುದೇನೆಂದರೆ ಇದನ್ನು ಪಾಸುಮಾಡಿಕೊಡಿ ಎಂದು ನಮ್ಮನ್ನು ಒತ್ತಾಯಮಾಡಬೇಡಿ. ಇದರ ಬಗ್ಗೆ ಕುಳಿತುಕೊಂಡು ಚರ್ಚೆಯನ್ನು ಮಾಡೋಣ. ಈ ಬಿಲ್‌ನ್ನು ವಿತ್‌ಡ್ರಾ ಮಾಡಿಬಿಡಿ. ಈ ಬಿಲ್ಲನ್ನು ತರುವುದರಲ್ಲಿ ಅರ್ಥವೇ ಇಲ್ಲ, ಇಷ್ಟೊಂದು ಕಂಡಿಷನ್‌ನ್ನು ಹಾಕಿ ಅಷ್ಟು ವರ್ಷಗಳ ಕಾಲ ಪ್ರಾಕ್ಟೀಸ್‌ನ್ನು ಮಾಡಿದವರಿಗೆ ಇಲ್ಲಿ ಎಲ್ಲಾ ವ್ಯಾಪ್ತಿಯಿಂದ ಹೊರಗೆ ಇಡುವಂತಹದ್ದು ಸರಿಯಾಗುವುದಿಲ್ಲ. ದಯವಿಟ್ಟು ತಾವು ಇದರ ಬಗ್ಗೆ ಅಲೋಚನೆಯನ್ನು ಮಾಡಬೇಕು. ದಯವಿಟ್ಟು ಇದನ್ನು ವಿತ್‌ಡ್ರಾ ಮಾಡಬೇಕು. ಏಕೆಂದರೆ ನಮ್ಮ ಸಹೋದ್ಯೋಗಿಗಳು ಇದನ್ನು ಏತಕ್ಕಾಗಿ ತಂದಿದ್ದಾರೆಂಬುದು ನನಗೆ ಅರ್ಥವಾಗುವುದಿಲ್ಲ, ಅವರು ಇದರ ಬಗ್ಗೆ ಅಲೋಚನೆಯನ್ನು ಮಾಡಿದ್ದಾರೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ದಯವಿಟ್ಟು ಇದನ್ನು ವಾಪಸ್ಸು ಪಡೆಯಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಅದರಲ್ಲಿ ಕರ್ನಾಟಕ ರಾಜ್ಯದಲ್ಲಿ ವೃತ್ತಿ ನಡೆಸುವ ಮತ್ತು ಬಾರ್ ಕೌನ್ಸಿಲ್‌ನ ಪಟ್ಟಿಯಲ್ಲಿರುವ ಹೆಸರನ್ನು ಹೊಂದಿರುವ ಪ್ರತಿಯೊಬ್ಬ ನ್ಯಾಯವಾದಿಯೂ ನಿಧಿಯ ಸದಸ್ಯನಾಗತಕ್ಕದ್ದು, ಈಗ ನಾವೆಲ್ಲರೂ ನಿಧಿಯ ಸದಸ್ಯರಾಗಬೇಕು. ಹೌದು, ಆಗಿದ್ದೇವೆ. ಆದರೆ ಇದರ ಬಗ್ಗೆ ಪುನಃ ಕೊನೆಯಲ್ಲಿ ಬೆನಿಫಿಟ್ ಪಡೆಯಬೇಕಾದರೆ ಇದನ್ನು ನಾವು ರಿನ್ಯೂ ಮಾಡುತ್ತಲೇ ಹೋಗಬೇಕಾಗುತ್ತದೆ. ಇದನ್ನು 5 ವರ್ಷಕ್ಕೊಂದು ಸಾರಿ ಮಾಡಲೇಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ಮಾನ್ಯ ಸದಸ್ಯರುಗಳು ಚರ್ಚೆ ಮಾಡುತ್ತಿದ್ದಾರೆ. ಪ್ರಾಯಶಃ ಅದಕ್ಕೇನಾದರೂ ಇಲ್ಲಿ ಬಂದು ಬೆಳಕನ್ನು ಚೆಲ್ಲುತ್ತಾರೆ. ಎಂದಿಟ್ಟುಕೊಂಡರೆ ಇದರ ಸಾಧಕಬಾಧಕಗಳು ಹೇಗಿದೆ ಎಂದು ಗೊತ್ತಿಲ್ಲದೆ ಇರುವುದರಿಂದ ಅವರು ಇಲ್ಲಿಗೆ ಬಂದು ಹೇಳುತ್ತಾರೆ. ಈ ಅಧಿವೇಶನದಲ್ಲಿ ಆಗದಿದ್ದರೆ ಮುಂದಿನ ಅಧಿವೇಶನದಲ್ಲಿ ಇದನ್ನು ಸಮಗ್ರವಾಗಿ ಜಾರಿಗೆ ತರಬಹುದು.

ಶ್ರೀ ಕೆ.ಬಿ. ಬೋಪಯ್ಯ (ಮಡಿಕೇರಿ) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಒಂದು ಅಡ್ವೋಕೇಟ್ ವೆಲ್‌ಫೇರ್ ಫಂಡ್ ಏನಿದೆ, ಹಿಂದೆ ನಾವೆಲ್ಲರೂ ಸದಸ್ಯರಾದಾಗ 9 ಸಾವಿರ

ರೂಪಾಯಿಗಳನ್ನು ಕೊಟ್ಟು ಇದರ ಸದಸ್ಯತ್ವ ಪಡೆದಿದ್ದೆವು. ಅದರ ಜೊತೆಗೆ ಅಡ್ವೋಕೇಟ್ಸ್ ವೆಲ್‌ಫೇರ್ ಫಂಡ್ ಪ್ರತಿಯೊಂದು ವಕಾಲತ್ತು ಹಾಕುವಂತಹದ್ದು ಜಾರಿಯಲ್ಲಿದೆ. ಈಗ ಮತ್ತೆ ನಾವು ಹಾಕುವಂತಹ ಎಲ್ಲಾ ಇಂಟರ್‌ಲಾಕ್ಯೂಟರಿ ಅಪ್ಲಿಕೇನ್ಸ್‌ಗೆ ಮತ್ತೆ 5 ರೂಪಾಯಿಗಳ ಸ್ಟಾಂಪ್ ಹಾಕಬೇಕೆಂದರೆ ಬಹುಶಃ ಒಂದು ಸಿವಿಲ್ ಕೇಸಿನಲ್ಲಿ 50 ಇಂಟರ್‌ಲಾಕ್ಯುಟರಿ ಅಪ್ಲಿಕೇಷನ್ಸ್ ಬರುತ್ತದೆ. ಹೀಗಾದರೆ ಇದರ ಪರಿಸ್ಥಿತಿ ಹೇಗಾಗುತ್ತದೆ ? ಬಹಶಃ ಈ ಒಂದು ತಿದ್ದುಪಡಿ ಏನು ತಂದಿದ್ದೀರಿ, ಮತ್ತೆ 5 ವರ್ಷಕ್ಕೆ ಒಂದು ಸಾರಿ ರಿನ್ಯೂ ಮಾಡಬೇಕು, ಮತ್ತೇ ಹಣವನ್ನು ಕಟ್ಟಬೇಕು, ಇದು ಅಡ್ವೋಕೇಟ್ಸ್ ವೆಲ್‌ಫೇರ್ ಫಂಡ್‌ಗಿಂತ ಇದು ಅಡ್ವೋಕೇಟ್ಸ್‌ಗಳಿಗೆ ಹೇರಾಸ್‌ಮೆಂಟ್ ಮಾಡುವಂತಹ ಕಾಯಿದೆಯಾಗಿದೆ. ಇದು ಯಾವುದೇ ಕಾರಣಕ್ಕೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಮಾಧುಸ್ವಾಮಿಯವರು ಹೇಳಿದಂತೆ ಇದು ವಕೀಲರ ಹಿತಾಶಕ್ತಿಗಿಂತ ಬಹುಶಃ ವಕೀಲರಿಗೆ ತೊಂದರೆ ಕೊಡುವಂತಹದ್ದು ಇದರಲ್ಲಿ ಜಾಸ್ತಿ ಇದೆ ಎಂದು ನಾನು ಭಾವಿಸುತ್ತೇನೆ. ದಯವಿಟ್ಟು ಈ ಒಂದು ತಿದ್ದುಪಡಿಗಳು ಏನಿದೆ, ಅದನ್ನು ವಾಪಸ್ಸು ತೆಗೆದುಕೊಳ್ಳ ಬೇಕು. ಈಗ ಜಾರಿಯಲ್ಲಿರುವಂತಹ ಕಾಯಿದೆಯ ಸರಿಯಾಗಿದೆ. ನಾವು ಎಲ್ಲದಕ್ಕೂ 5 ರೂಪಾಯಿಗಳ ಸ್ಟಾಂಪ್ ಹಾಕುತ್ತೇವೆ ಮತ್ತು 2000 ರೂಪಾಯಿಗಳನ್ನು ಈಗಾಗಲೇ ಕಟ್ಟಿದ್ದೇವೆ. ಅದನ್ನೇ ಮುಂದುವರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದು ಖಂಡಿತವಾಗಿಯೂ ಅಡ್ವೋಕೇಟ್ಸ್‌ಗಳಿಗೆ ವೆಲ್‌ಫೇರ್ ಎಂದು ಆಗುವುದಿಲ್ಲ.

ಶ್ರೀ ಕೆ. ವಿಶ್ವೇಶ್ವರಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ಈ ವಿಧೇಯಕವನ್ನು ವಿರೋಧಿಸುತ್ತಾ ನಾನು ಒಂದೇ ಒಂದು ಮಾಹಿತಿಯನ್ನು ಮತ್ತು ಸ್ಪಷ್ಟೀಕರಣವನ್ನು ಕೇಳುವುದೇನೆಂದರೆ, ಈಗ ಕರ್ನಾಟಕ ರಾಜ್ಯದ ವಕೀಲರ ಸಂಘದವರಮೇಲೆ ನೀವೇನಾದರೂ ಒತ್ತಡವನ್ನು ತಂದು ಈ ಬಿಲ್ಲನ್ನು ತಂದಿದ್ದೀರಾ ಹೇಗೆ ? ಇಲ್ಲವೆಂದರೆ ವಕೀಲರ ಸಂಘದವರು ಏತಕ್ಕಾಗಿ ಹೀಗೆ ಹೇಳುತ್ತಾರೆ ಎನ್ನುವಂತಹದ್ದು ಪ್ರಶ್ನೆ ಸರ್ಕಾರ ಈ ರೀತಿಯಾಗಿ ನ್ಯಾಯವಾದಿಗಳ ಸಂಘ ಹೇಳಿದೆ ಎಂದು ಹೇಳಿ ಅವರ ಹೆಸರನ್ನು ಮುಂದಿಟ್ಟುಕೊಂಡು ಅವರಿಗೆ ತೊಂದರೆಯಾಗುವಂತಹ ವಿಧೇಯಕವನ್ನು ತರುವಂತಹ ಪ್ರಯತ್ನ ಏತಕ್ಕಾಗಿ ಮಾಡುತ್ತಿದೆ ; ಎನ್ನುವುದು ಬಹಳ ಮುಖ್ಯವಾಗಿದೆ. ಸರ್ಕಾರ ಅವರ ಮೇಲೆ ಏನಾದರೂ ಒತ್ತಡವನ್ನು ನಿರ್ಮಾಣ ಮಾಡಿದೆಯೋ, ಅವರು ಈ ರೀತಿಯಾಗಿ ತರುವುದಕ್ಕೆ ಇನ್ಯಾವ ಪರಿಸ್ಥಿತಿ ಅವರಿಗೆ ಕಾರಣವಾಗಿದೆಯೋ ನಿಮ್ಮ ಮತ್ತು ಅವರ ಚರ್ಚೆ ಮೂಲಕ ಅದನ್ನು ಸ್ಪಷ್ಟೀಕರಿಸಿದರೆ ಒಳ್ಳೆಯದು ಎಂಬುದು ನನ್ನ ಭಾವನೆ.

ಶ್ರೀ ಕೆ.ಜಿ. ಬೋಪಯ್ಯ : ವಕೀಲರ ಸಂಘಕ್ಕೂ ಬಾರ್ ಕೌನ್ಸಿಲ್‌ಗೂ ವ್ಯತ್ಯಾಸವಿದೆ. ಇದು ಬಾರ್ ಕೌನ್ಸಿಲ್‌ನವರು ಒತ್ತಡವನ್ನು ಹೇರುವಂತಹದ್ದು ಏನಿದೆ. ಖಂಡಿತವಾಗಿಯೂ ಎಲ್ಲಾ ವಕೀಲರ ಸಂಘದವರೂ ಇದನ್ನು ವಿರೋಧ ಮಾಡುತ್ತಾರೆ. ಇದನ್ನು ಬಾರ್ ಕೌನ್ಸಿಲ್‌ನವರು ಮಾಡುವದ್ದು ಬಹುಶಃ ಅವರಿಗೆ ಅವರದ್ದೇ ಆಗಿರುವಂತಹ ಕಾರಣಗಳಿರಬೇಕು.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಾಧುಸ್ವಾಮಿಯವರು, ಸನ್ಮಾನ್ಯ ಜಯಪ್ರಕಾಶ್‌ಹೆಗ್ಡೆ ಹಾಗೂ ಸನ್ಮಾನ್ಯ ಬೋಪಯ್ಯನವರು ಕೆಲವರು ತಕರಾರುಗಳನ್ನು ಹಾಗೂ ತಮ್ಮದೇ ಆಗಿರುವಂತಹ ಅತಂಕಗಳನ್ನು ವ್ಯಕ್ತಮಾಡಿದ್ದಾರೆ. ಸನ್ಮಾನ್ಯ ವಿಶ್ವೇಶ್ವರ ಹೆಗಡೆಯವರು ರಾಜಕೀಯ ಕಣ್ಣುಗಳಿಂದ ಇದನ್ನು

ನೋಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಾವು ಯಾರ ಮೇಲೆ ಒತ್ತಡವನ್ನು ತಂದು ಈ ಬಿಲ್ಲನ್ನು ತಂದಿರುವುದಿಲ್ಲ. ಈ ಬಿಲ್ಲನ್ನು ತಂದಿರುವಂತಹ ಮೂಲ ಉದ್ದೇಶ ವಕೀಲರ ವೃತ್ತಿಯಲ್ಲಿರುವವರಿಗೆ ಅನುಕೂಲ ಮಾಡಿಕೊಡಬೇಕು. ಅವರದ್ದೇ ಆಗಿರುವಂತಹ ವೆಲ್‌ಫೇರ್ ಫಂಡ್ ಏನಿದೆ, ಅದರಲ್ಲಿ ಯಾರ್ಯಾರು ಅರ್ಹರಿದ್ದಾರೆ ಅವರಿಗೆ ಅದು ಮುಟ್ಟಬೇಕು, ಅದು ಸರಿಯಾಗಿ ಅವರಿಗೆ ತಲುಪುವ ಸಲುವಾಗಿ ಈ ಕಾನೂನಿನ ಬದಲಾವಣೆಯನ್ನು ಬಾರ್‌ಕೌನ್ಸಿಲ್‌ನ ಒಂದು ವಿನಂತಿ ಹಿನ್ನೆಲೆಯೊಳಗೂ ಸಹಿತ ಅವರ ಜೊತೆ ಚರ್ಚೆ ಮಾಡಿ ತಂದಿದ್ದೇವೆ. ಇದು ಒಂದು ರೀತಿ ಮಾನ್ಯ ಮಾಧುಸ್ವಾಮಿ ಹೇಳುವಂತಹ ಒಂದು ವಿಚಾರ ಏನಿದೆ ಅದು 60 ವರ್ಷಗಳ ನಂತರ ಅಥವಾ ಸರ್ಕಾರಿ ನೌಕರಿಯಿಂದ ನಿವೃತ್ತಿ ಯಾದ ಮೇಲೆ ಅಥವಾ ಜಡ್ಜ್‌ಗಳು ನಿವೃತ್ತಿಯಾದ ಮೇಲೆ ಈ ವೃತ್ತಿಗೆ ಬಂದು ಅವರು ಹೆಚ್ಚಿಗೆ ಲಾಭವನ್ನು ಪಡೆಯುವುದು ಸಾಧ್ಯತೆಯಾಗುತ್ತದೆ, ಅದು ಆಗಬಾರದು ಎಂಬ ಉದ್ದೇಶದಿಂದಲೇ 1 ಲಕ್ಷದ 50 ಸಾವಿರ ರೂಪಾಯಿಗಳು ಯಾವುದೇ ಕಾರಣಕ್ಕಾಗಿ ಹಾಗೆಯೇ ಹೊಸದಾಗಿ ಈ ವೃತ್ತಿಗೆ ಸೇರಿದವರಿಗೆ ಅದು ಸಿಕ್ಕಬಾರದು ಎಂಬುದು ಅವರ ಉದ್ದೇಶವಿದ್ದಂತೆ ಕಾಣುತ್ತದೆ. ಆದರೂ ಸಹ ತಾವು ಏನು ಕೆಲವು ವಿಚಾರಗಳನ್ನು ಎತ್ತಿದ್ದೀರಿ, ಈ ಹಿನ್ನೆಲೆಯೊಳಗೆ ನಾನು ಈ ಸದನಕ್ಕೆ ಒಂದು ಮಾತುಗಳನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಬಾರ್ ಕೌನ್ಸಿಲ್‌ನ ಪ್ರತಿನಿಧಿಗಳನ್ನು ಹಾಗೂ ನಮ್ಮ ಫ್ಲೋರ್ ಲೀಡರ್ಸ್‌ನ್ನು ಕರೆದು ಇದರ ಬಗ್ಗೆ ಚರ್ಚೆ ಮಾಡಿದನಂತರ ಮತ್ತೇನು ಬದಲಾವಣೆಗಳನ್ನು ತರಬೇಕೋ ಅದನ್ನು ತರುತ್ತೇನೆ, ಆ ಸಂದರ್ಭದಲ್ಲಿ ಮತ್ತೆ ಇದನ್ನು ಪಾಸು ಮಾಡುವ ಸಲುವಾಗಿ ಸರ್ಕಾರ ಒತ್ತಾಯವನ್ನು ಮಾಡುತ್ತದೆ. It will lie over.

ಅಧ್ಯಕ್ಷರು : ಈಗ ಕರ್ನಾಟಕ ಪುರಸಭೆಗಳ ಮತ್ತು ಇತರ ಒಂದು ಕಾನೂನು ತಿದ್ದುಪಡಿ ವಿಧೇಯಕ ಅರ್ಡಿನೆನ್ಸ್ ರಿಪ್ಲೇಸ್‌ಮೆಂಟ್ ಬಿಲ್‌ನ್ನು ತಂದಿದ್ದಾರೆ. ಮಾನ್ಯ ಸಚಿವರು ವಿಧೇಯಕವನ್ನು ಮಂಡಿಸಬೇಕು.

ಶಾಸನ ರಚನೆ

(ಇ) ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕ 2005

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೆ "2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2005ರ ಕರ್ನಾಟಕ ಪೌರ ಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."
ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಗಯಿತು.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು)

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."